ಸುಧಾ 60 ವಜ್ರ ಮಹೋತ್ಸವ

# 'ಸುಧಾ' ಜೊತೆಗಿನ ಓದುಗರ ಒಡನಾಟ

## ಧಾರಾವಾಹಿ ನಂಟು

ಉತ್ತರ ಕರ್ನಾಟಕದ ನಮಗೆಲ್ಲ 'ಸುಧಾ' 1969ರಿಂದ ಪರಿಚಿತಳು. ಹಲವಾರು ಲೇಖನ, ಕಥೆಗಳು, ಧಾರಾವಾಹಿಗಳಲ್ಲದೇ ಸಿನಿಮಾ ಪ್ರಪಂಚ, ಎಳೆಯರ ಅಂಗಳ, ನೀವು ಕೇಳಿದಿರಿ ಹೊತ್ತು ಶೃಂಗಾರಮಯವಾಗಿ ಬರುವ 'ಸುಧಾ'ಗೆ ನಮ್ಮ ಮನೆಯಲ್ಲಿ ಎಲ್ಲಿಲ್ಲದ ಬೇಡಿಕೆ. ಮೊದಲು ಓದಲು ಕಿತ್ತಾಟ, ಮುನಿಸು.

'ಸುಧಾ' ಆಪ್ತಳಾದದ್ದು, ಧಾರಾವಾಹಿಗಳಿಂದ. 'ಎಡಕಲ್ಲು ಗುಡ್ಡದ ಮೇಲೆ', ಅಂಧಪರ್ವ, ಸಂಪ್ರದಾನ, ಮುಸುಕು, ಹೊಂಬಿಸಿಲು... ಒಂದಾ, ಎರಡಾ?. ಈಚೆಗಂತೂ ನವನವೀನಳಾಗಿ, ಕಾಲಕ್ಕೆ ತಕ್ಕಂತೆ ಮಾಹಿತಿ ತಂತ್ರಜ್ಞಾನ, ವಿಶ್ವ ಪರಿಚಯಗಳೊಂದಿಗೆ ಆಗಮಿಸುತ್ತಿದ್ದಾಳೆ. ಆರು ದಶಕಗಳಿಂದಲೂ ಅಚ್ಚುಕಟ್ಟಾಗಿ, ವಿಚಾರಯುಕ್ತವಾಗಿ, ಶೈಕ್ಷಣಿಕವಾಗಿ, ಮನರಂಜನೆಯಾಗಿ 'ಸುಧಾ' ಮೂಡಿಬರುತ್ತಿದ್ದಾಳೆ.

—ಸೇತುರಾವ್ ಕುಲಕರ್ಣಿ, ಬೆಂಗಳೂರು

## ಅವ್ವನ ನೆನಪು...

1980ರಲ್ಲಿ ಧಾರವಾಡದಲ್ಲಿ ಓದುತ್ತಿದ್ದ ಸಮಯ. ನನ್ನ ಸಹಪಾಠಿ ವೃಂದಾಳ ಕೈಯಲ್ಲಿ ಮೊದಲ ಬಾರಿ 'ಸುಧಾ' ನೋಡಿದೆ. ನನ್ನ ಅವ್ವನ ಹೆಸರೂ 'ಸುಧಾ' ಆದ್ದರಿಂದ ಗಮನಸೆಳೆದು ತಕ್ಷಣವೇ ಪಡೆದು ಓದಿದೆ. ಅಂದಿನಿಂದ 'ಸುಧಾ' ಅನುಬಂಧ ಶಾಶ್ವತವಾಗಿದೆ. ನನ್ನ ಬೆಳವಣಿಗೆಯಲ್ಲಿ 'ಸುಧಾ' ಪಾಲು ದೊಡ್ಡದು. ಈಗ ನನ್ನವ್ವ ಇಲ್ಲ. ಆದರೆ ಅವಳ ನೆನಪಲ್ಲಿ 'ಸುಧಾ' ನನಗೆ ವಾತ್ಸಲ್ಯ ತೋರುತ್ತಿರುವಂತೆ ಅನ್ನಿಸುತ್ತದೆ.

'ಸುಧಾ' ಸರ್ವದಾ ಸುಂದರವಾಗಿ, ಕನ್ನಡ ಮನಸ್ಸುಗಳ ಸ್ವರ್ಗ ಸೀಮೆಯಾಗಲಿ ಎಂದು ಪ್ರೀತಿಯಿಂದ ಹಾರೈಸುತ್ತೇನೆ.

—ಯು.ಜೆ. ಕುಲಕರ್ಣಿ, ಬಾಗಲಕೋಟೆ

## ಹೆಸರಿನಲ್ಲಿದೆ ಆಪ್ತತೆ

ನಾನು 18ನೇ ವಯಸ್ಸಿನಲ್ಲಿದ್ದಾಗ 'ಸುಧಾ' ಆರಂಭವಾದದ್ದು. ನಾನು ಸಹ ಪತ್ರಿಕೆ ಆರಂಭಗೊಳ್ಳುವ ಮುನ್ನ ಪತ್ರಿಕೆಗೆ ಹೆಸರು ಸೂಚಿಸಿದ್ದೆ. ಆದರೆ ನನ್ನ ಹೆಸರುಗಳು ಆಯ್ಕೆಯಾಗಿರಲಿಲ್ಲ. ನಾನು ಕಳುಹಿಸಿದ ಹೆಸರು ಬರಲಿಲ್ಲ ಎಂದು ಬೇಸರವಾದರೂ 'ಸುಧಾ' ಎಂಬ ಹೆಸರು ತುಂಬಾ ಹಿಡಿಸಿತ್ತು. ಅದೇ ಸಮಯದಲ್ಲಿ ನಮ್ಮ ಚಿಕ್ಕಪ್ಪನಿಗೆ ಹೆಣ್ಣು ಮಗುವಾಗಿತ್ತು. ನಾನು ಆ ಮಗುವಿಗೆ 'ಸುಧಾ' ಎಂದೇ ಹೆಸರು ಇಡಲು ಶಿಫಾರಸ್ಸು ಮಾಡಿ ಅದೇ ಹೆಸರಿಟ್ಟರು. ಈಗ ನನಗೆ 78 ವರ್ಷ. ಈಗಲೂ 'ಸುಧಾ' ನನ್ನ ಅಚ್ಚುಮೆಚ್ಚಿನ ಸಂಗಾತಿ.

—ನಿರ್ಮಲಾ, ಶಿವಮೊಗ್ಗ



## ಕಾಯಂ ಅಭಿಮಾನಿ ನಾನು...

1990ರಲ್ಲಿ ಭದ್ರಾವತಿಯ ಅರಳಿಹಳ್ಳಿಯ ಬ್ಯಾಂಕ್‌ನಲ್ಲಿ ಕಾರ್ಯ ನಿರ್ವಹಿಸುತ್ತಿದ್ದೆ. ಆಗ 'ಸುಧಾ'ಗೆ 25ನೇ ವರ್ಷದ ರಜತ ಸಂಭ್ರಮ. ಈಗ 60ರ ಸಡಗರ!.

ನನ್ನ ತಿಜೋರಿಯಲ್ಲಿ ತಡಕಾಡಿದೆ. ಅಂತೂ ಸಿಕ್ತು, 35 ವರ್ಷದ ಹಿಂದೆ ನಾ ಬರೆದ ಪುಟ್ಟ ಪತ್ರದ ಮೂಲ ಪ್ರತಿ. 'ಸುಧಾ'ದಲ್ಲಿ ಪ್ರಕಟವಾದ ಪತ್ರ, ಅಂಚೆಯಲ್ಲಿ ಬಂದ ಗೌರವ ಪ್ರತಿ, ಗೌರವ ಧನದ ದಾಖಲೆ... ನೆನಪು ಹೊರಳಿತು ಅಂದಿನ ದಿನದತ್ತ. ಆಗ ಬೆಲೆ ₹3; ನನ್ನ ಪುಟ್ಟ ಪತ್ರಕ್ಕೆ ₹50 ಗೌರವ ಧನ!.

ಇಂದಿಗೂ ನಾನು 'ಸುಧಾ' ನೆಚ್ಚಿನ ಅಭಿಮಾನಿ. 'ಸುಧಾ' ಮನೆ ಬಾಗಿಲಿಗೆ ಬಂದ ತಕ್ಷಣವೇ ಪುಟ ತಿರುವಿ, ಕಚೇರಿ ಮುಗಿದೊಡೆ ಸಂಜೆ ಓದಲು ಅದೇನೋ ಕಾತರ, ಖುಷಿ. ಓದಿ ಮುಗಿಸುವ ಹೊತ್ತಿಗೆ ಮತ್ತೊಂದು 'ಸುಧಾ' ಆಗಮನ. ಈ ಅಭ್ಯಾಸ ಇಂದಿನವರೆಗೂ ಸಾಗಿದೆ... ಮುಂದೆಯೂ. 'ಸುಧಾ' ಈಗ ಸೀನಿಯರ್ ಸಿಟಿಜನ್!

ನಾನು ನಿವೃತ್ತಿಯಾಗಿ 2 ವರ್ಷ. ಆದರೆ 'ಸುಧಾ' ಓದಿಗೆ ನಿವೃತ್ತಿ ಇಲ್ಲ!.

ಸುಧಾಕ್ಕೀಗ ಅರವತ್ತು<br>
ಇದರಲ್ಲಿದೆ ಓದಿನ ಗಮ್ಮತ್ತು<br>
ಎಲ್ಲಾ ವಿಷಯದ ಮಾಹಿತಿ<br>
ಕೊಡುತ್ತಿದೆ ಮತ್ತೂ ಮತ್ತೂ<br>
ಅಂದು, ಇಂದು, ಮುಂದೂ<br>
ಓದುತ್ತೇವೆ ಯಾವತ್ತೂ<br>
ಅದುವೇ ವಾಚಕರ ಸ್ವತ್ತು!<br>
ಇದ ಹೇಳಿಕೊಳ್ಳುವುದೇ ಗತ್ತು!

—ನಗರ ಗುರುದೇವ್ ಭಂಡಾರ್ಕರ್, ಹೊಸನಗರ

## ಪ್ರೀತಿಯ ಅಜ್ಜಿಗೆ,

ನನಗೆ 7 ವರ್ಷವಿದ್ದಾಗಲೇ 'ಸುಧಾ' ನೋಡುತ್ತಿದ್ದೆ. ನನ್ನ ಅಜ್ಜಿ 'ಸುಧಾ' ಫ್ಯಾನ್. ಅವರು ಪತ್ರಿಕೆಗೆ ಲೇಖನಗಳನ್ನು ಬರೆಯುತ್ತಿದ್ದರು. ಲೇಖನದಲ್ಲಿ ಅವರ ಹೆಸರು ಪ್ರಕಟವಾಗಿದ್ದನ್ನು ಕಂಡಾಗ ನನಗೂ ನನ್ನ ಹೆಸರು ಬರಬೇಕೆನ್ನುವ ಆಸೆ ಹುಟ್ಟಿತು. 'ಎಳೆಯರ ಅಂಗಳ', 'ನಿಮ್ಮ ಪುಟ' ನನ್ನ ಮೆಚ್ಚಿನ ಅಂಕಣಗಳು. 'ಕುಂಚ ಪ್ರಪಂಚ'ದಲ್ಲಿ ನಾನು ಬರೆದ ಕೆಲವು ಚಿತ್ರಗಳು ಮತ್ತು 'ನಿಮ್ಮ ಪುಟ'ದಲ್ಲಿ ನನ್ನ ಪುಟ್ಟ ಲೇಖನಗಳು ಪ್ರಕಟಗೊಂಡಿವೆ. ಪ್ರತಿ ವಾರ ಕುತೂಹಲದಿಂದ 'ಸುಧಾ' ಓದುತ್ತೇನೆ. ಮುಂದೆ ನಾನೂ ಲೇಖನಗಳನ್ನು ಬರೆಯುತ್ತೇನೆ...

ನಿಮ್ಮ ಪ್ರೀತಿಯ ಮೊಮ್ಮಗಳು ಅನನ್ಯ

## ಓದುವ ಹುಚ್ಚು ಹಿಡಿಸಿತು

ನಾನಾಗ ಕುಂದಾಪುರದ ಕೋಟದಲ್ಲಿ ಪ್ರಾಥಮಿಕ ಶಾಲೆಯಲ್ಲಿದ್ದೆ. ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಅಧಿಕಾರಿಯಾಗಿದ್ದ ನಮ್ಮ ತಂದೆಯವರು 'ಸುಧಾ' ತರುತ್ತಿದ್ದರು. ಅವರಿಂದಾಗಿಯೇ ಮನೆಯಲ್ಲಿ ಎಲ್ಲರಿಗೂ ಓದುವ ಹುಚ್ಚು ಶುರುವಾಗಿದ್ದು. ಬೇರೆ ಬೇರೆ ಊರುಗಳಿಗೆ ವರ್ಗವಾಗುತ್ತಾ ಇದ್ದರೂ 'ಸುಧಾ' ಒಡನಾಟ ತಪ್ಪಿರಲಿಲ್ಲ. ಮತ್ತೆ ವರ್ಗವಾದಾಗ ನನ್ನ ಸ್ನೇಹಿತೆ, ನಮ್ಮನೆಯಿಂದ ಹಳೆಯ 'ಸುಧಾ' ಕಂತೆಗಳನ್ನು ಒಯ್ದಳು. ಅವಳಿಂದ ಇನ್ನಷ್ಟು ಸ್ನೇಹಿತೆಯರಿಗೆ ತಲುಪಿತ್ತು. ಹೀಗೆ 'ಸುಧಾ' ಪ್ರೀತಿಯೂ ಹರಿಯುತ್ತಲೇ ಇದೆ.

—ಬಿ.ಎಸ್. ಜಯಶ್ರೀ, ಮಂಗಳೂರು

## ಸುಂದರವಾದ ಸಾಂಗತ್ಯ

ನಾನು ಹಾಗೂ 'ಸುಧಾ' ಓರಗೆಯವರು. ಓದು ಕಲಿಯುವ ಮುಂಚೆ ಅಮ್ಮ ಬಿಡುವಿನ ವೇಳೆಯಲ್ಲಿ ಓದಿ ಹೇಳುತ್ತಿದ್ದರು. ನಾನೇ ಓದಲು ಕಲಿತಾಗ ಓದಿ ಖುಷಿಪಡುತ್ತಿದ್ದೆ. ಧಾರಾವಾಹಿಗಳನ್ನು ಪುಸ್ತಕದಂತೆ ಮಾಡಿ ಬಿಡುವಿನಲ್ಲಿ ಓದುತ್ತಿದ್ದೆ. ಮದುವೆಯಾಗಿ ಅತ್ತೆ ಮನೆಗೆ ಬಂದಾಗ ಅಲ್ಲೂ 'ಸುಧಾ' ಪತ್ರಿಕೆ ತರಿಸುವ ವಿಚಾರ ತಿಳಿದು ಸಂತೋಷವಾಯಿತು. ಮೊದಲು ಅತ್ತೆ ಓದಿ ಮುಗಿಸಿದ ನಂತರ ಬೇರೆಯವರಿಗೆ. ಅವರು ಯಾವಾಗ ಮುಗಿಸುತ್ತಾರೋ ಎಂದು ಕಾಯುತ್ತಿದ್ದೆ. ಇಂದಿಗೂ 'ಸುಧಾ' ನನ್ನ ಆಪ್ತಸ್ನೇಹಿತೆ.

—ಕೆ.ಎಸ್. ಸವಿತಾ, ಬೆಂಗಳೂರು